O S No.61-2022
ಪಿ. ಡಬ್ಲ್ಯೂ-1

(ಇಂದು ದಿಃ 29-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟಿ ಸವಾಲು ಶ್ರೀ **MAJ** ವಕೀಲರಿಂದಃ

ಕಾಶಮ್ಮ ನನ್ನ ಮಗಳು ಎಂದರೆ ಸರಿ. ಕಾಶಮ್ಮ ಹೆಸರಿನಲ್ಲಿ 9 ಎಕರೆ ಜಮೀನು ಇದೆ. ಸದರಿ ಜಮೀನನ್ನು ನನ್ನ ಅಣ್ಣ ಬುಗ್ಗಯ್ಯ ಕಾಶಮ್ಮನ ಹೆಸರಿಗೆ ಮಾಡಿದ್ದಾರೆ ಎಂದರೆ ಸರಿ. ಬುಗ್ಗಯ್ಯನಿಗೆ ಮಕ್ಕಳು ಇಲ್ಲ ಎಂದು ಕಾಶಮ್ಮನನ್ನು ತನ್ನ ಬಳಿ ಇಟ್ಟು ಕೊಂಡಿದ್ದ ಎಂದರೆ ಸರಿ. ಕಾಶಮ್ಮನಿಗೆ ನೀಡಿದ 9 ಎಕರೆ ಜಮೀನು ಪೂರ್ವಜರ ಜಮೀನು ಎಂದರೆ ಸರಿ . ಸರ್ವೇ ನಂ 90 ರಲ್ಲಿ 7 ಎಕರೆ 8 ಗುಂಟೆ ಜಮೀನನ್ನು ಬುಗ್ಗಯ್ಯ ನೋಂದಾಯಿತ ಕ್ರಯ ಪತ್ರದ ಮೂಲಕ ದಿ 27-04-1982 ರಂದು ಖರೀದಿ ಮಾಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಕೂಡ ಖರೀದಿ ಮಾಡಲು ಹಣ ಕೊಟ್ಟಿದ್ದೇ ಎಂದು ಹೇಳುತ್ತಾರೆ. ಸರ್ವೇ ನಂ 93 ರಲ್ಲಿನ 12 ಎಕರೆ 12 ಗುಂಟೆ ಜಮೀನನ್ನು ನನ್ನ ಅಣ್ಣ ಆತನ ಹೆಂಡತಿ 1 ನೇ ಪ್ರತಿವಾದಿ ಹೆಸರಿನಲ್ಲಿ ದಿ. 25-05-1985 ರಂದು ಖರೀದಿ ಮಾಡಿದ್ದರು ಎಂದರೆ ಸರಿ . ಸಾಕ್ಷಿ ಮುಂದುವರೆದು ಸದರಿ ಖರೀದಿಗೆ ನಾನು ಹಣ ಕೊಟ್ಟಿದ್ದೆ ಎಂದು ಹೇಳುತ್ತಾರೆ. ಸರ್ವೇ ನಂ 74 ರಲ್ಲಿ 11 ಎಕರೆ 25 ಗುಂಟೆ ಜಮೀನನ್ನು ದಿ. 23-11-1981 ರಂದು ನನ್ನ ಅಣ್ಣ ನೋಂದಾಯಿತ ಖರೀದಿ ಪತ್ರದ ಮೂಲಕ ಖರೀದಿ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಖರೀದಿಗೆ ನಾನು ಹಣ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನನ್ನ ಅಣ್ಣ 11 ಎಕರೆ 25 ಗುಂಟೆ ಪೈಕಿ ಕಾಶಮ್ಮರರಿಗೆ 6 ಎಕರೆ ಮತ್ತು ತನ್ನ ಎರಡನೇ ಹೆಂಡತಿ ಮಹದೇವಮ್ಮ ರವರಿಗೆ 5 ಎಕರೆ 25 ಗುಂಟೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಅದರಂತೆ ದಿ. 06.11.2006 ರಂದು ಅವರ ಹೆಸರಿಗೆ ಮುಟೇಷನ್ ಆಗಿದೆ ಎಂದರೆ ಸರಿಯಲ್ಲ. 1981 ರಿಂದ ಎಲ್ಲಾ ಜಮೀನುಗಳು ನನ್ನ ಅಣ್ಣ ಮತ್ತು ಆತನ ಹೆಂಡತಿಯ ಹೆಸರಿನಲ್ಲಿ ಇವೆ ಎಂದರೆ ಸರಿಯಲ್ಲ.

ಯಾರು ಯಾರು ಕಡೆಯಿಂದ ಬುಗ್ಗಯ್ಯ ಮೇಲಿನ ಜಮೀನುಗಳನ್ನು ಖರೀದಿ ಮಾಡಿದ ನನಗೆ ಗೊತ್ತಿಲ್ಲ. ಪ್ರತಿ ಖರೀದಿ ಪತ್ರ ಆದಾಗ ನಾನು ಬುಗ್ಗಯ್ಯನಿಗೆ 30 ಸಾವಿರ ರೂಪಯಿ ಕೊಟ್ಟಿದ್ದೇನೆ. ಈ ಸಂಗತಿಯನ್ನು ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ ಎಲ್ಲಾ ಖರೀದಿಗಳು 1 ಸಾವಿರ ರೂಪಾಯಿಗಿಂತ ಕಡಿಮೆ ಹಣಕ್ಕೆ ಆಗಿವೆ ಎಂದರೆ ಸರಿಯಲ್ಲ. ಖರೀದಿ ಪತ್ರದ ಕಾಲಕ್ಕೆ ನನ್ನ ಬಳಿ ಹಣ ಇತ್ತು ಮತ್ತು ನಾನು ಅದನ್ನು ಬುಗ್ಗಯ್ಯನಿಗೆ ಕೊಟ್ಟಿದ್ದೇನೆ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ. ಖರೀದಿ ಪತ್ರಗಳು ಆದಗಿನಿಂದ ಸದರಿ ಪತ್ರಗಳು ನನ್ನ ಅಣ್ಣ ಮತ್ತು ನನ್ನ ಹೆಸರಿನಲ್ಲಿ ಆಗಬೇಕಾಗಿತ್ತುಆದರೆ ತಪ್ಪಾಗಿದ್ದು ಸದರಿ ಜಮೀನುಗಳಲ್ಲಿ ನನಗೆ ಅರ್ಧ ಭಾಗ ಇದೆ ಎಂದು ಈ ದಾವೆ ಹಾಕುವರೆಗೆ ಬೇರೆ ದಾವೆ ಹಾಕಿಲ್ಲ. ಸಾಕ್ಷಿ ಮುಂದುವರೆದು ಸರ್ವೇ ನಂ 95 ರಲ್ಲಿ 3 ಎಕರೆ ಜಮೀನನ್ನು 1 ನೇ ಪ್ರತಿವಾದಿ ಮಾರಾಟ ಮಾಡಲು ಹೋದಾಗ ನನಗೆ ವಿಷಯ ಗೊತ್ತಾಗಿದೆ ನಂತರ ಈ ದಾವೆ ಹಾಕಿದ್ದೇನೆ ಎಂದು ಹೇಳುತ್ತಾರೆ. ಸರ್ವೇ ನಂ 95 ರಲ್ಲಿನ ಜಮೀನು ಕಾಶಮ್ಮ ನ

ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಕಾಶಮ್ಮ ಸರ್ವೇ ನಂ 95 ರಲ್ಲಿನ ಜಮೀನನ್ನು ಕಳೆದ ವರ್ಷ ಸ್ವರೂಪ ಎನ್ನುವವರಿಗೆ ನೋಂದಾಯಿತ ಖರೀದಿ ಪತ್ರ ದ ಮೂಲಕ ಮಾರಾಟ ಮಾಡಿದ್ದಾಳೆ ಎಂದರೆ ಸರಿ. ಸದರಿ ಜಮೀನು ಮಾರಾಟ ದಿಂದ ಬಂದ ಹಣದಲ್ಲಿ ನಾನು ಅರ್ದ ಹಣ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ 95 ರಲ್ಲಿ ನನಗೆ ಸೇರಿದ ಅರ್ದ ಭಾಗ ಜಮೀನು ಇದೆ ಎಂದರೆ ಸರಿಯಲ್ಲ. ಸರ್ವೇ ನಂ 95 ರ ಜಮೀನು ಮಾತ್ರ ಪೀರ್ತಾಜೀತ ಸ್ವತ್ತಾಗಿದ್ದು ನನಗೆ ಅದರಲ್ಲಿ ಮಾತ್ರ ಭಾಗ ಇತ್ತು ಕಾರಣ ಸದರಿ ಸ್ವತ್ತನ್ನು ಬುಗ್ಗಯ್ಯ ನನಗೆ ಕೊಟ್ಟಿದ್ದು ಎಂದರೆ ಸರಿಯಲ್ಲ.

ಸರ್ವೇಯಾದ ಬಗ್ಗೆ ADLR ಕಚೇರಿಯಲ್ಲಿ ನಾನು ತಕಾರಾರು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. 3 ನೋಂದಾಯಿತ ಖರೀದಿ ಪತ್ರಗಳ ಮೂಲಕ ಬುಗ್ಗಯ್ಯ ಖರೀದಿ ಮಾಡಿದ್ದ ಜಮೀನುಗಳು ಆತನ ಸ್ವಯಾರ್ಜಿತ ಜಮೀನುಗಳು ಆಗಿದ್ದವು ಎಂದರೆ ಸರಿಯಲ್ಲ. ಬುಗ್ಗಯ್ಯ ತೀರಿ ಹೋದ ನಂತರ ಆತನ ಹೆಂಡತಿ 1 ನೇ ಪ್ರತಿವಾದಿ ಮತ್ತು ಮಗಳು 2 ನೇ ಪ್ರತಿವಾದಿಗೆ ತೊಂದರೆ ಕೋಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವೆ ಹಾಕಿದರೆ ಭಾಗ ಸಿಕ್ಕರು ಸಿಗಬಹುದು ಎಂದು ಯೋಚನೆ ಮಾಡಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೂ ನನಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸ್ವರೂಪ ಖರೀದಿ ಮಾಡಿದ ಜಮೀನಿನಲ್ಲಿ ಅವರೇ ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಜಮೀನುಗಳಲ್ಲಿ ನನಗೆ ಯಾವುದೇ ಹಕ್ಕು, ಭಾಗ ಇಲ್ಲ ಎಂದರೆ ಸರಿಯಲ್ಲ. ಪೀತ್ರಾರ್ಜೀತ ಆಸ್ತಿಯಲ್ಲಿ ನನ್ನ ಭಾಗಕ್ಕೆ ಬಂದಿರುವ ಜಮೀನಿನಲ್ಲಿ ಮಾತ್ರ ನಾನು ಸ್ವಾದೀನದಲ್ಲಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

**(1 ನೇ ಪ್ರತಿವಾದಿ ವಕೀಲರು ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಎಮ್.ಎ.ಸಿ.ಟಿ., ಸೇಡಂ